**GUJARAT PETROSYNTHESE LIMITED**
**Reg. Off:** No.24, II Main, Doddanekkundi
Industrial Area,
Phase I, Mahadevapura Post, Bangalore-560 048.
Ph: 91 – 80 - 28524133 Fax: 91– 80 - 28524171
E-mail : info@gpl.in, Website: www.gpl.in
CIN No. L23209KA1977PLC043357

**Date: April 26, 2021**

**To**
**Department of Corporate Service**
**Bombay Stock Exchange Limited,**
**1st Floor, P.J. Towers,**
**Dalal Street, Mumbai – 400001**

**Scrip Code – 506858**

**Subject: Intimation pursuant to Regulation 47 of SEBI (Listing Obligations and Disclosures Requirements) Regulations, 2015.**

Dear Sir/ Madam,

Pursuant to provisions of Regulation 47 of SEBI (Listing Obligations and Disclosures Requirements) Regulations, 2015, and General Circular No. 13/2020 dated 08th April, 2020, General Circular No. 17/ 2020 dated 13th April, 2020 and General Circular No. 39/2020 dated 31st December, 2020, please find enclosed the copy of newspaper publications of the public notice to the shareholders on Monday, April 26, 2021 for registration of their email address to update the same in the records of the relevant depositories in the following newspapers:

1. Hindu in English Language; and
2. Udayavani in Kannada language

Kindly take the same on record.

Thanking You,

**For Gujarat Petrosynthese Limited**

Urmi N. Prasad
______________________________
**Urmi N. Prasad**
**Joint Managing Director**
**DIN:** 00319482
**Address:** 8-2-417/301, Mount Kailash, Road No. 4,
Banjara Hills, Hyderabad-500034.

**Place:** Hyderabad
**Date:** April 26, 2021

# ‘No proposal on weekday curfew yet’

SPECIAL CORRESPONDENT
BENGALURU

Refusing to speak on the speculation over the extension of weekend curfew, Home Minister Basavaraj Bommai on Sunday said there was no proposal to extend the curfew to the weekdays.

“I will not participate in any speculation over the extension of the weekend curfew. There has been no discussion at the government level on the weekday curfew so far,” he told reporters. He added that the issue was not discussed even on Saturday when Chief Minister B.S. Yediyurappa chaired a meeting to discuss the COVID-19 issue. “The status quo will continue as of now,” he said.

Meanwhile, sources in the Chief Minister’s Office also said there was no such agenda before the State government. “Whatever is being implemented will continue,” an official said.

Mr. Bommai also said the Centre’s allocation of 800 tonnes of oxygen would “greatly bring down” the stress on the State and there would be no scarcity in the coming days. He said that efforts were being made to ensure that there is no shortage of vaccination for those above 45 years who will be require the second dose and for those between 18 and 45, who will be eligible for vaccination from May 1.

# Yediyurappa’s diktat has uneven impact

## CM had asked Cabinet colleagues to monitor the situation closely in the districts they are in charge of

KARNATAKA BUREAU
BENGALURU




A file photo of S.T. Somashekar, who is in charge of Mysuru, speaking to health workers in the district; and (right) Deputy Chief Minister Govind Karjol, who is in charge of Kalaburagi and Bagalkot districts, holding a virtual meeting with district officials.

Nearly a week after the BJP government came under intense criticism from the Opposition over district in-charge Ministers not doing enough in their districts, it seems to have been a mixed effort from the Ministers, who have been present, physically or virtually, to monitor the situation.

Following the criticism from the Opposition at the all-party meeting convened by Governor Vajubhai R. Vala, the Ministers were nudged to be more proactive in their districts by Chief Minister B.S. Yediyurappa. The surge in COVID-19 cases outside Bengaluru has become a cause for concern since several districts are reporting a higher Case Fatality Rate and higher cases in proportion to their population.

However, it has now emerged that most of the Ministers monitoring their own home districts in their capacity as district in-charge are working from the ground, while the others remain mostly physically absent and are monitoring remotely.

**No one in charge**

Belagavi and Chikkamagaluru districts have no district in-charge Ministers following the resignation of Ramesh Jarkiholi and C.T. Ravi. Belagavi is being monitored informally by Food and Civil Supplies Minister Umesh Katti, while officials are managing the Chikkamagaluru situation. Incidentally, four Cabinet Ministers, including Mr. Katti, are from Belagavi.

Deputy Chief Ministers Govind Karjol and Laxman Savadi, who are the in-charge Ministers of Kalaburagi and Raichur, respectively, have not been seen in the districts in the recent past. Mr. Karjol, who is in charge of his native district Bagalkot as well, had opted for virtual monitoring during floods. He has chosen the same mode this time too.

After visiting Raichur along with Mr. Yediyurappa last month for attending the BJP’s election campaign for Maski, Mr. Savadi has not returned to the district. He, however, held a meeting online on Friday. Koppal in-charge and Agriculture Minister B.C. Patil, who is from Hirekerur in Haveri district, held a meeting of senior officers

COVID-19

and legislators on April 19. After that, he neither visited the district nor held any virtual meetings, sources said.

In the coastal district of Udupi, Home Minister Basavaraj Bommai has only been able to participate in a video-conference meeting with the district administration once, on April 22.

Kodagu in-charge and Housing Minister V. Somanna visited Madikeri last Friday and promised to hold videoconference meetings thrice a week. Minister for Cooperation S.T. Somashekar, who is in charge of Mysuru district, had accompanied Health Minister K. Sudhakar during a visit on Thursday. Minister for Primary and Secondary Education S. Suresh Kumar, who is in charge of Chamarajanagar, met officials on Friday. Minister for Excise K. Gopalaiah, the Hassan in-charge, visited the district on Friday. The Ministers are “in touch on phone” with officials, these district administrations claim.

**On home turf**

Meanwhile, Ministers holding charge in their home districts – such as Backward Classes and Muzrai Minister Kota Srinivas Poojary in Dakshina Kannada, Minister for RDPR K.S. Eshwarappa in Shivamogga, Prabhu Chauhan in Bidar, and Anand Singh in Ballari – have been seen spending more time being physically present there.

*(Compiled by Sharath S. Srivatsa with inputs from R. Krishna Kumar, Laiqh A. Khan, Kumar Buradikatti, Rishikesh Bahadur Desai, Ravi Prasad Kamila, and G.T. Satish)*

# State’s vaccine demand to be discussed

SPECIAL CORRESPONDENT
BENGALURU

Union Fertilizers and Chemicals Minister D.V. Sadananda Gowda on Sunday said the State has sought a higher allocation of vaccination doses in the coming days, which will be discussed in the next Union Cabinet meeting.

Speaking to reporters after holding discussions with Health Minister K. Sudhakar, he also said the Centre changed the policy of allocation of Remdesivir after States said it was not appropriate to allocate the drug based on oxygen consumption. It is now done based on case count.

# Majority favours offline exam for Class X

## GRAAM holds Statewide opinion poll

SPECIAL CORRESPONDENT
MYSURU

A three-day opinion poll conducted by Grassroots Research and Advocacy Movement (GRAAM), a public policy research and advocacy initiative, last week saw a majority of the respondents favouring the conduct of Class X examination with due precautions.

The opinion poll, conducted between April 16 and 19, captured the responses of various stakeholders, including teachers, students and parents, besides the general public, said GRAAM executive director Basavaraj R. Shreshta. A total of 1,487 respondents – 737 from rural areas and 750 from urban areas – participated in the Statewide survey, conducted by sharing a simple and structured online questionnaire.

The question went: “Should the board exam for class X students be conducted in 2021 amidst the COVID-19 pandemic?”

“It is interesting to note that 78% of teachers, 60% of students, 60% of parents, and 65% of the general public who participated in the survey were in favour of conducting the exam at this juncture. In total, 64% of the respondents favoured holding the exam,” said a statement issued by GRAAM.


When asked for an option to consider promotion of students to the next class without holding exam, but on the basis of internal assessment marks, a little more than half – 51% – of the respondents opined that the children should not be promoted this way. “Interestingly, 68% of the students expressed their consent to getting promoted to the next class based on internal assessment,” the survey report said.

A majority of the respondents (70%) opposed the idea of holding the exam online for the Class X students. “A total of 64% of the students, 71% of parents, 86% of teachers, and 64% of the general public opposed the idea of online examination,” the report stated.

Expectedly, the opposition to online exam was more from people in rural areas (77%) than in urban areas (63%). More than any other respondents, it was the teachers (86%) who were most against the idea of online exam.

Also, a majority of respondents opined that students would face difficulty in choosing their next discipline of study without the results of class X exam.

## CORRIDORS OF POWER



**What is ‘UK’?**

Senior BJP leader Umesh Katti *(in picture)*, who is now Food and Civil Supplies Minister, had been demanding the creation of a separate “Uttara Karnataka” State and had wished, publicly, that his son would become the Chief Minister of the “UK State” one day. In the past few years, he has made this statement every now and then. However, he has not repeated this since he was inducted into the Cabinet a few months ago. Meanwhile, his family has invested in a luxury hotel in Belagavi. Interestingly, it is named “UK -27”. Recently, journalists waiting for Chief Minister B.S. Yediyurappa at a hotel met Mr. Katti. A scribe asked him why he had stopped speaking about the separate State and asked whether his dream State of the “UK” existed only in imagination. Mr. Katti laughed aloud and said the “UK” that he had been talking about was just the name of the hotel, and not another State. He insisted that joining the Cabinet had nothing to do with the demand for a separate State. Any takers for this line of defence?

**Spare the discourse**

It has been argued that the export of COVID-19 vaccine by the Narendra Modi-led Union government is one of the reasons for the poor vaccination drive in the country. Even as the second wave of infection has struck lakhs of Indians, the Opposition Congress has highlighted the shortage of vaccines, ventilators, ICUs beds, and oxygen, and taken the Centre to task for its failure to properly manage the pandemic. Karnataka Pradesh Congress Committee president D.K. Shivakumar has alleged that Mr. Modi exported vaccine in the ambition of becoming a global leader, but it cost the country’s people heavily. Instead of giving daily *pravachanas* (discourses), the Prime Minister should focus on increasing vaccination to save lives, he suggested.

**Over to wife**



Former Chief Minister Siddaramaiah *(in picture)* has publicly refused to make any donation for the construction of a Ram temple in Ayodhya, citing its disputed nature. Wary of the BJP targeting him, he was forced to reveal to the public for the first time the fact that he has been silently patronising the construction of a Ram Mandir in his own native Siddaramanahundi in Mysuru. The construction of the temple was taken up more than a year ago, but was suspended because of the pandemic. It was, however, resumed subsequently and the inauguration was fixed for April 19 by Mr. Siddaramaiah, his wife Parvathamma, and son Yathindra, as per the plaque installed at the temple. With the inaugural date coming in the midst of a raging second wave of COVID-19, the former Chief Minister and his son, who is an MLA, gave the function a miss. Congress leaders in the district defended the father-son duo’s absence by saying they did not wish to attract a crowd during the pandemic and expose people to the infection. So, the inauguration by Ms. Parvathamma, who rarely makes public appearances, was perhaps just as low-key and inconspicuous as Mr. Siddaramaiah had originally intended.

RISHIKESH BAHADUR DESAI
NAGESH PRABHU
LAIQH A. KHAN

# Revenue of Kukke temple drops

SPECIAL CORRESPONDENT
MANGALURU

The COVID-19 pandemic and reduced footfall has hit one of the richest temples of Karnataka. The annual revenue of Kukke Subrahmanya Temple, a Muzrai temple, dropped by ₹29.98 crore in 2020-21, falling from ₹98.92 crore in 2019-20 to ₹68.94 crore.

Many devotees from the State and outside visit the temple, mainly to offer “*sarpa samskara*” and “*ashlesha bali*” sevas. Both sevas are offered by people irrespective of religion. The temple attracts actors, politicians, and cricket players, among others.

According to Mohanram Sulli, chairman of the temple management committee, the temple remained closed for devotees from March 17 to September 8 last year because of the lockdown and COVID-19 restrictions. Hence, the temple did not earn any revenue for about six months.

The temple earns its revenue from hundi droppings, which include money, silver and gold, the fees fixed for sevas, rentals of its buildings and accommodation facilities, its arecanut plantation, and the interest on bank deposits and investments.

During the last financial year, the revenue earned from hundi droppings stood at ₹12.75 crore, while that from various sevas was ₹24.10, Mr. Sulli said. He said the government allowed the conducting of some sevas from September 14 for a limited number of participants. More sevas with more participants were allowed in a phased manner subsequently.


## OBITUARY & REMEMBRANCE

### DEATH



DOB: 19.06.1940

DOD: 25.04.2021

With profound grief we regret to inform the sad demise of

**Sri. L. SABARETNAM**

on 25th April 2021 in Chennai.

Dear Appa, we thank you for flourishing our home with happiness and warmth. It is so difficult to believe that you are no longer with us. You have been such a great Man and a great Human. Your presence will always be remembered. We miss you so much.

— In Grief: —

Saba Singaram & Uma (9894229466) Saba Lakshman & Priya (9840112978) Chitra & Nagappan, Siva Sabaretnam, All Grand Children

### DEATH ANNIVERSARIES

**5TH DEATH ANNIVERSARY**




**JAGADAMMA & KRISHNA PILLAI**

*"Acha and Amma we miss you terribly"*

Remembered by: Loving Daughter and Grand Daughter

### DEATH

OBITUARY




**Mr. VIVEK BENDRE (59)**

Senior Special News Photographer, The Hindu, Mumbai.

Passed away on 25-04-2021.

Address: Building No: 2, Choudhary House, 1st Bhatwadi, J S S Road, Girgaum, Mumbai - 400004. Mobile: 9653405943.

**Death**



**Sri.V.RamaSubramanian**
B.Sc. F.C.A
Chartered Accountant,
Aged 96 yrs
Founder: Ramakrishna & Co
Chartered Accountants
Tuticorin - 628 001.
Passed away peacefully in Sleep on 25.04.2021.
Cremation on 26.04.2021.
Easwar & Lakshmi
Jayashree & Narayanaswamy
Sriram & Sumitha
Contact : 98431 20023
(0461) : 2320023.

### DEATH ANNIVERSARIES

**18th DEATH ANNIVERSARY**



In fond remembrance of our beloved father

**Sri Gotur Mahareddy Seetharama Reddy**

Your ideals will always be an inspiration to us. You will always be in our memories, prayers and heart. We miss you everyday. Rest in peace.

Sons:
G.M.P. Reddy, IPS
DGP & IGP (Retd.)
State Information Commissioner
Kolkata, West Bengal
G.M. Mallikarjuna Reddy
Auditor
G.M. Ravi Rajashekar Reddy
Advocate
Daughter:
Smt. Rajalakshmi
Ballari

90512 70444
94480 68068
94483 67067

**Gujarat Petrosynthese Limited**
Reg. Off: No. 24, II Main, Doddanekkundi Industrial Area, Phase I, Mahadevapura Post, BANGALORE- 560 048.
Ph: 91-80-28524133 Fax: 91-80-28524171
E-mail : info@gpl.in, Website: www.gpl.in
CIN No. L23209KA1977PLC043357

**PUBLIC NOTICE**

**ATTENTION SHAREHOLDERS OF GUJARAT PETROSYNTHESE LIMITED**

Gujarat Petrosynthese Limited requests its shareholders to register their email address and mobile number for updating the said details in the records of the relevant Depositories through their Depository Participants or by visiting the website of its Registrar and Transfer Agent, BigShare Services Pvt Ltd ("RTA") at https://www.bigshareonline.com/InvestorRegistration.aspx for sending certain documents/information as required.

The RTA can also be contacted at: investor@bigshareonline.com

No action is required from Shareholders whose email address and mobile number are already duly updated.

Place: Bangalore
Date : April 26, 2021

For Gujarat Petrosynthese Ltd.
Sd/-
Urmi N Prasad
Joint Managing Director

**IN THE COURT OF THE CITY CIVIL AND SESSIONS JUDGE AT BENGALURU**

**Ex.No. 4309 of 2018 (CCH.62)**

In

A.C. No. 74/2016 C/w A.C. No. 75 of 2016 and A.C. No. 76 of 2016

**BETWEEN : Sri Ravi Ankineedu Prasad,** S/o. late Subbarayadu, aged about 77 years, R/of No.138, 4th A Cross, Kasturinagar, Bengaluru-560 043.
...Decree Holder

**AND : Sri B. Adishekara Reddy** And others
...Judgment Debtors

**Notice to Judgment Debtors 3 and 5:**

**3. Sri Jyothula Satyaraprasad Rao,** S/o. late Appa Rao, aged about 56 years, R/of No.2152/11, Nirvan, 15th Cross, 8th Main, D - Block, Sahakarnagar, Bengaluru-560 092.

**5. M/s. AIPRO,** A Partnership Firm having office at No.3420, 2nd Floor, Service Road, RPC Layout, Vijayanagar II Stage, Bengaluru-560 064, Represented by its Partner.

Whereas, the Decree Holder has filed execution petition for execution as per award passed in AC.No.74/2016, AC.No.75/2016 and AC.No.76 of 2016, to direct the JDR No.1 to execute a sale deed in favour of DHR with respect to schedule property, In the alternative, this Hon'ble Court may execute a sale deed in favour of DHR with respect to the schedule property. Hence, judgment debtors named above is hereby ordered to appear before this, court **on 10.06.2021 at 11.00 a.m.** either personally or through a pleader duly instructed to answer all the question. If you fail to appear on the above said day, the matter will be heard and determined in your absence.

**SCHEDULE**

All that piece and parcel of land bearing Sy.No. 83, measuring 20 guntas Situated at Suragajakkanahalli Village, Kasaba Hobli, Anekal Taluk, Bengaluru Urban District, bounded on:

**East by:** land bearing Sy.No. 81 & No. 82, **West by:** Land bearing Sy.No. 84, **North by:** Land belonging to Sri Muniyappa, **South by:** Land bearing Sy.No. 71.

Given under my hand and seal of the court on this 21st day of April 2021.

**By Order of the Court, Assistant Registrar, City Civil Court, Bangalore.**

Advocate for Decree Holders
Sd/- BALARAJ .A.C, Y.H. VIJAYA KUMAR, K. GURUDHATTA and T.K. SHIVANNA
No. 618, 3rd Floor, Rajeshwari Market Building, Avenue Road, Bengaluru-560 009.

**CLASSIFIEDS MART**

TO ADVERTISE:
www.thehinduads.com
Bengaluru: 98455 29981; 080-22071826
Mangaluru: 0824-2417575; 2417580
Hubballi: 0836-2338600; 2335700

**PERSONAL**

**CHANGE OF NAME**

**I, RAKESH** S/O Shivappa born on 12/10/1999 residing at Navangar Hubli, have changed my name to Rakesh S Ulligeri vide affidavit dated 22/04/2021 at Dharwad.

**BANGALORE WATER SUPPLY AND SEWERAGE BOARD**

**INVITATION FOR TENDER** (Through e-Procurement Portal Only)

**BWSSB invites TENDERS from the eligible tenderers for the following work.**

Office of the Chief Engineer (Design), 9th Floor, Cauvery Bhavan, K.G. Road, Bengaluru - 560 009.

| Sl. No. | Division | IFT Number | Amount put to tender / EMD(In Rs.) |
|---|---|---|---|
| 1 | DC & BVM | BWSSB/EE(DC&BVM)D/PB/ BVM/93/ 2020-21, Dt. 20.04.2021 | Rs. 28,66,500/- <br> Rs. 57,330/- |

Last date & time for Submission of Tender: **10.05.2021 upto 4:00p.m.** Date & time for Opening of Tender: **12.05.2021 at 12:00p.m.** The details regarding the tender and participation in the e-procurement portal process can be obtained by logging on to **https://eproc.karnataka.gov.in** For further details contact the undersigned office during working hours.

Sd/-
DIPR/DDU/RA/265/2021-22
Executive Engineer(DC&BVM).

**COVID-19. DO NOT PANIC, BE AWARE**

Wear Mask | 6 Feet Follow Physical Distancing | Maintain Hand Hygiene

**Karnataka Power Transmission Corporation Limited**

(CIN : U40109KA1999SGC025521)

**SHORT TERM TENDER NOTIFICATION**

(Through e-Procurement Mode Only)

No.: 908/BGK/SEE/EE(O)/AEE-1/Tr.(W&M)/F-53/530-40 Date: 23.04.2021

Karnataka Power Transmission Corporation Limited invites tenders against Tender No: **KPTCL/BGK/SEE/21-22/INSULATOR/VJT-MHPR.** “Replacement of defective porcelain insulators by polymer insulator of 220KV VAJJRAMATTI-MAHLINGAPUR D/C line from Loc. No.: 392 to 461 for a distance of **20.516kms.** under TLM Section, KPTCL, Mahalingapur.

The tenders will be received through e-procurement portal only. The details regarding participation in the e-procurement process can be obtained by logging on to KPTCL Website: **www.kptcl.karnataka.gov.in** on hyperlink “e-Procurement-KPTCL” or to **https://eproc.karnataka.gov.in** on or after **26.04.2021.** Any other details can be obtained from the office of the under signed during office hours.

**Sd/- Superintending Engineer, Electricity, Transmission (W&M) Circle, KPTCL, Opposite Sector No. 45, Zonal Office Complex, Navanagara, Bagalkote - 587103.**

**KARNATAKA POWER TRANSMISSION CORPORATION LIMITED**

(CIN : U40109KA1999SGC025521)

No. SEE/Tr(M)/BMAZ(N)/EE(O)/AEE-2/F-98-1A/20-21/846-49 Date: 23.04.2021

**TENDER NOTIFICATION** (E-PROCUREMENT MODE ONLY)

KPTCL invites bid against enquiry no. KPTCL/SEE/Tr(M)/BMAZ(N)/EE(O)/AE/21-22/EPR-02 to EPR-07 dated: 22.04.2021 for Arranging shift operation and minor maintenance at various 220kV & 66kV S/s in (Package-1 to Package-6) coming under the jurisdiction of BMAZ North Circle, Bengaluru **on total turnkey basis.** The detailed notification regarding the subject tenders can be got by logging on to **https://kptcl.karnataka.gov.in** with hyperlink 'e-Procurement - KPTCL' or to **https://eproc.karnataka.gov.in on or after 28.04.2021.** Any other details can be had from the office of the undersigned.

**Sd/- Superintending Engineer (Elecl.)**
Transmission (Maintenance), BMAZ, North Circle, KPTCL, Office Complex, Ground Floor, A.R.Circle, Bengaluru-560009. Ph./Fax : 22386686-85

## ಪೊಲೀಸ್ ಆಯುಕ್ತರ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ

**ಮಂಗಳೂರು:** ಫೇಸ್‌ಬುಕ್ ಖದೀಮರು ಈಗ ಮಂಗಳೂರು ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಅವರ ವೈಯಕ್ತಿಕ ಫೇಸ್‌ಬುಕ್ ಖಾತೆಯನ್ನು ಕೂಡ ಹ್ಯಾಕ್ ಮಾಡಿದ್ದು ಅವರ ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿದ್ದಾರೆ. ಈ ಬಗ್ಗೆ ಭಾನುವಾರ ಮಾಹಿತಿ ನೀಡಿರುವ ಆಯುಕ್ತರು. 'ನನ್ನ ಹೆಸರು ಮತ್ತು ನನ್ನ ವೈಯಕ್ತಿಕ ವಿವರವನ್ನೊಳಗೊಂಡ ನಕಲಿ ಫೇಸ್‌ಬುಕ್ ಖಾತೆಯನ್ನು ಸೃಷ್ಟಿಸಲಾಗಿದೆ. ಈ ಖಾತೆಯ ಮೂಲಕ ಹಣಕ್ಕಾಗಿ ಕೋರಿಕೆ ಬರಬಹುದು. ಜಾಗರೂಕರಾಗಿರಿ' ಎಂದು ಫೇಸ್‌ಬುಕ್ ಬಳಕೆದಾರರಲ್ಲಿ ಮನವಿ ಮಾಡಿದ್ದಾರೆ. ಈ ಹಿಂದೆಯೂ ಸೈಬರ್ ಖದೀಮರು ಪೊಲೀಸ್ ಇಲಾಖೆ ಸೇರಿದಂತೆ ಕೆಲವು ಇಲಾಖೆಗಳ ಹಿರಿಯ ಅಧಿಕಾರಿಗಳ ನಕಲಿ ಫೇಸ್‌ಬುಕ್ ಖಾತೆಗಳನ್ನು ಸೃಷ್ಟಿಸಿ ಅಸಲಿ ಖಾತೆಯಲ್ಲಿದ್ದ ಫ್ರೆಂಡ್ಸ್ ಲಿಸ್ಟ್‌ನ್ನು ತೆಗೆದು ಅವರೆಲ್ಲರಿಗೂ ನಕಲಿ ಖಾತೆಯ ಮೂಲಕ ಸಂದೇಶ ಕಳುಹಿಸಿ ಹಣದ ಸಹಾಯ ಮಾಡುವಂತೆ ಕೋರಿದ್ದರು.

### ಕೊರೊನಾ ಎರಡನೇ ಅಲೆ ಉಲ್ಬಣ ■ ಮುಂದಿನ ಶೈಕ್ಷಣಿಕ ವರ್ಷದ ಮೇಲೂ ದುಷ್ಪರಿಣಾಮ ಸಾಧ್ಯತೆ

# ಶೈಕ್ಷಣಿಕ ದಾಖಲಾತಿ ಮಾಡದ ಪಾಲಕ, ಪೋಷಕರಲ್ಲಿ ಆತಂಕ

• ರಾಜು ಖಾರ್ವಿ ಕೊಡೇರಿ

**ಬೆಂಗಳೂರು:** ಶುಲ್ಕ ವಿವಾದ, ತರಗತಿಗಳು ಸರಿಯಾಗಿ ನಡೆಯದೇ ಇರುವುದು, ಆನ್‌ಲೈನ್ ತರಗತಿ ಕಿರಿಕಿರಿ ಸೇರಿ ಅನೇಕ ಕಾರಣಕ್ಕೆ ಪ್ರಸಕ್ತ ಸಾಲಿನಲ್ಲಿ ತಮ್ಮ ಮಕ್ಕಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಯಾವ ತರಗತಿಗೆ ಸೇರಿಸಬೇಕೆಂಬ ಗೊಂದಲ ಪಾಲಕ, ಪೋಷಕರಲ್ಲಿ ಸೃಷ್ಟಿಯಾಗಿದೆ.

2019-20ನೇ ಸಾಲಿನಲ್ಲಿ ರಾಜ್ಯಪಠ್ಯಕ್ರಮದ ಶಾಲೆಗಳಿಗೆ ಒಂದನೇ ತರಗತಿಗೆ ಸೇರಿದ ಮಕ್ಕಳು ಮುಂದಿನ ಶೈಕ್ಷಣಿಕ ವರ್ಷದಲ್ಲಿ 3ನೇ ತರಗತಿ ಪ್ರವೇಶಿಸಲಿದ್ದಾರೆ. ಆದರೆ, ಈ ಮಕ್ಕಳಿಗೆ ಎರಡನೇ ತರಗತಿಯಲ್ಲಿ ಯಾವೆಲ್ಲ ಪಾಠ ಇತ್ತು ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಐದನೇ ತರಗತಿ ವರೆಗಿನ ಮಕ್ಕಳಲ್ಲೂ ಇದೇ ಸಮಸ್ಯೆ ಇದೆ. ಕಾರಣ, 2020-21ನೇ ಸಾಲಿನಲ್ಲಿ 1ರಿಂದ 5ನೇ ತರಗತಿ ಮಕ್ಕಳಿಗೆ ತರಗತಿಗಳೇ ನಡೆದಿಲ್ಲ. ಕೆಲ ಸಮಯ ವಿದ್ಯಾಗಮ ನಡೆದಿದ್ದು, ನಂತರ ರೇಡಿಯೋ ಮೂಲಕ ನಲಿಯುತ್ತ ಕಲಿಯೋಣ ಎಂಬ ಕಾರ್ಯಕ್ರಮ ಹೊರತುಪಡಿಸಿ ಬೇರೆ ಯಾವುದೇ ತರಗತಿಗಳು ಇರಲಿಲ್ಲ.

ಖಾಸಗಿ ಶಾಲೆಗಳು ಆನ್‌ಲೈನ್ ತರಗತಿ, ಪೂರ್ವ ಮುದ್ರಿತ ವಿಡಿಯೊ ತರಗತಿ ನಡೆಸಿವೆ. ಸರ್ಕಾರಿ ಶಾಲೆಯಲ್ಲಿ ಸ್ಥಳೀಯವಾಗಿ ಕೆಲವು ಶಿಕ್ಷಕರು ಪಾಲಕ, ಪೋಷಕರ ಮೊಬೈಲ್‌ಗೆ ವ್ಯಾಟ್ಸ್ ಆ್ಯಪ್ ಮೂಲಕ ಕಲಿಕಾ ಸಾಮಗ್ರಿಗಳನ್ನು ಕಳುಹಿಸುತ್ತಿದ್ದರಾದರೂ ಪರಿಣಾಮಕಾರಿಯಾದ ಬೋಧನೆ ಅಥವಾ ಕಲಿಕೆ ನಡೆದಿಲ್ಲ. ಈಗ ಮುಂದಿನ ಶೈಕ್ಷಣಿಕ ವರ್ಷವೂ ಕೊರೊನಾಕ್ಕೆ ಬಲಿಯಾದರೆ ಮಕ್ಕಳ ಶೈಕ್ಷಣಿಕ ಭವಿಷ್ಯ ಇನ್ನಷ್ಟು ಚಿಂತಾಜನಕವಾಗಲಿದೆ ಎಂದು ಪಾಲಕ, ಪೋಷಕರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರತಿ ವರ್ಷ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡುವುದು ಕಡ್ಡಾಯವಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಲವು ಬಾರಿ ದಾಖಲಾತಿ ಪ್ರಕ್ರಿಯೆಗೆ ಅವಕಾಶ ನೀಡಿತ್ತು. ಆದರೆ, ನಾನಾ ಕಾರಣಕ್ಕಾಗಿ ಖಾಸಗಿ ಶಾಲೆಗಳಿಗೆ ಹಲವು ಪಾಲಕ, ಪೋಷಕರು ತಮ್ಮ ಮಕ್ಕಳನ್ನು ಸೇರಿಸಿಲ್ಲ. ಜುಲೈ 15ರಿಂದ ಮುಂದಿನ ಶೈಕ್ಷಣಿಕ ವರ್ಷ ಆರಂಭವಾಗಿದೆ. ಮುಂದಿನ ತಿಂಗಳಿಂದ ಪ್ರವೇಶ ಪ್ರಕ್ರಿಯೆಗಳು ಆರಂಭವಾಗಲಿದೆ, (ಕೆಲವು ಖಾಸಗಿ ಶಾಲೆಗಳು ಈಗಾಗಲೇ ಆರಂಭಿಸಿವೆ) ಆದರೆ, ಕಳೆದ ಸಾಲಿನಲ್ಲಿ ದಾಖಲಾತಿ ಮಾಡದೇ ಇರುವ ಮಕ್ಕಳನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ಈ ಹಿಂದೆ ಕಲಿತ ತರಗತಿಗೆ ಸೇರಿಸಬೇಕೇ ಅಥವಾ ಮುಂದಿನ ತರಗತಿಗೆ ಸೇರಿಸಬೇಕೇ ಎಂಬ ಗೊಂದಲದಲ್ಲಿ ಪಾಲಕ, ಪೋಷಕರಿದ್ದಾರೆ. ಆದರೆ, ಖಾಸಗಿ ಶಾಲೆಗಳು ದಾಖಲಾತಿ ಮಾಡದ ಮಕ್ಕಳ ಮೌಲ್ಯಮಾಪನ ಮಾಡುವುದು ಕಷ್ಟ. ಹೀಗಾಗಿ ಪಾಲಕರು ಪುನಃ ಅದೇ ಶಾಲೆಗೆ ಮಕ್ಕಳನ್ನು ಸೇರಿಸಬೇಕಾಗುತ್ತದೆ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

**ಕೊರೊನಾ ಆತಂಕ:** ವಾರ್ಷಿಕ ಮೌಲ್ಯಾಂಕನ ಪರೀಕ್ಷೆ ಇಲ್ಲದೇ ಎರಡು ಶೈಕ್ಷಣಿಕ ವರ್ಷ ಕಳೆದಿದ್ದು, ಮುಂದಿನ ಶೈಕ್ಷಣಿಕ ವರ್ಷಕ್ಕೂ ಕೊರೊನಾ ಎರಡನೇ ಅಲೆಯ ಭೀತಿ ಕಾಡಲಾರಂಭಿಸಿದೆ. ಪ್ರಸಕ್ತ ಶೈಕ್ಷಣಿಕ ವರ್ಷ ಅಂತಿಮ ಘಟ್ಟ ತಲುಪಿದ್ದು, 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಮೌಲ್ಯಾಂಕನ ಪರೀಕ್ಷೆ ಇಲ್ಲದೆ ತೇರ್ಗಡೆ ಮಾಡುವ ಜತೆಗೆ ಬೇಸಿಗೆ ರಜೆ ಘೋಷಿಸಲಾಗಿದೆ. ಮೇ ಮತ್ತು ಜೂನ್ ತಿಂಗಳಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಸುವ ಬಗ್ಗೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ಜುಲೈನಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಆರಂಭಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದೆ. ಆದರೆ, ಕೊರೊನಾ ಎರಡನೇ ಅಲೆ ಉಲ್ಬಣಗೊಳ್ಳುತ್ತಿರುವುದರಿಂದ ಮುಂದಿನ ಶೈಕ್ಷಣಿಕ ವರ್ಷದ ಮೇಲೂ ಇದರ ದುಷ್ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

> **ಮುಂದಿನ ಶೈಕ್ಷಣಿಕ ವರ್ಷದ ಆರಂಭಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ್ದೇವೆ. ಜುಲೈ 15ರಿಂದ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಕೊರೊನಾ ಎರಡನೇ ಅಲೆ ಅಷ್ಟೊತ್ತಿಗೆ ಕಡಿಮೆಯಾಗಬಹುದು. ತರಗತಿ ಆರಂಭಿಸಲು ಇಲಾಖೆಯಿಂದ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳುತ್ತೇವೆ. ಪರಿಸ್ಥಿತಿ ನೋಡಿ, ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.**
>
> • ವಿ.ಅನ್ಬುಕುಮಾರ್, ಆಯುಕ್ತ, ಸಾರ್ವಜನಿಕ ಶಿಕ್ಷಣ ಇಲಾಖೆ

## ವಿಶೇಷ ಚೇತನರಿಗೆ ಆದ್ಯತೆ ಕೋರಿ ಅರ್ಜಿ: ಸರ್ಕಾರಕ್ಕೆ ನೋಟಿಸ್

**ಬೆಂಗಳೂರು:** ಕೋವಿಡ್-19 ಲಸಿಕಾ ಅಭಿಯಾನದಲ್ಲಿ ದಿವ್ಯಾಂಗರು ಅಥವಾ ವಿಶೇಷ ಚೇತನರಿಗೆ ಆದ್ಯತೆ ನೀಡಲು ಕೋರಿ ಸಲ್ಲಿಸಿದ ಅರ್ಜಿ ಸಂಬಂಧ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾ. ಎ.ಎಸ್. ಓಕ್ ಅವರ ನೇತೃತ್ವದ ವಿಭಾಗೀಯ ನ್ಯಾಯ ಪೀಠ ವಿಚಾರಣೆ ನಡೆಸಿತು. ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿತು.

'ಇದು ಗಂಭೀರ ವಿಚಾರವಾಗಿರುವುದರಿಂದ ಸೋಮವಾರ ವಿಶೇಷ ಕಲಾಪ ನಡೆಯುವುದರಿಂದ ಅಷ್ಟರೊಳಗೆ ಈ ಬಗ್ಗೆ ಸರ್ಕಾರ ಪ್ರತಿಕ್ರಿಯೆ ನೀಡಬೇಕು' ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

## ಆಸ್ಪತ್ರೆಯಲ್ಲಿ ಬೆಡ್ ಸಿಕ್ಕರೂ ಬದುಕದ ಕೊರೊನಾ ಸೋಂಕಿತ ವೃದ್ಧೆ

**ಕಲಬುರಗಿ:** ಜಿಲ್ಲೆಯಲ್ಲಿ ಸಕಾಲಕ್ಕೆ ಆಕ್ಸಿಜನ್ ಬೆಡ್ ಮತ್ತು ಚಿಕಿತ್ಸೆ ಸಿಗದ ಕಾರಣ ಕೊರೊನಾ ಸೋಂಕಿತ ವೃದ್ಧೆಯೊಬ್ಬರು ಮೃತಪಟ್ಟ ಘಟನೆ ಭಾನುವಾರ ಬೆಳಗ್ಗೆ ನಡೆದಿದೆ. ಶನಿವಾರ ಬೆಡ್‌ಗಾಗಿ ಆ್ಯಂಬುಲೆನ್ಸ್‌ನಲ್ಲಿ ಅನೇಕ ಆಸ್ಪತ್ರೆಗಳಿಗೆ ಅಲೆದಿದ್ದರೂ ಬೆಡ್ ಸಿಕ್ಕಿರಲಿಲ್ಲ. ಕೊನೆಗೆ ಸಂಜೆ ಜಿಮ್ಸ್‌ನಲ್ಲಿ ಬೆಡ್ ಸಿಕ್ಕು ದಾಖಲು ಮಾಡಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ವೃದ್ಧೆ ಕೊನೆಯುಸಿರೆಳೆದಿದ್ದಾರೆ. ಮೃತ ವೃದ್ಧೆ ಆಳಂದ ತಾಲೂಕಿನ ಕೆರೂರು ಗ್ರಾಮದ ನಿವಾಸಿಯಾಗಿದ್ದು, ಆ್ಯಂಬುಲೆನ್ಸ್‌ನಲ್ಲಿ ಹಲವು ಆಸ್ಪತ್ರೆಗಳಿಗೆ ಮಗ ಶಾಂತಪ್ಪ ಮತ್ತು ಕುಟುಂಬದವರು ಕರೆದುಕೊಂಡು ಹೋಗಿದ್ದರು. ನಾನು ಬಳ್ಳಾರಿಯ ಅಗ್ನಿ ಶಾಮಕ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ತಾಯಿಗೆ ಹುಷಾರಿಲ್ಲ ಎಂಬ ಕಾರಣಕ್ಕೆ ಬೈಕ್ ತೆಗೆದುಕೊಂಡು ಊರಿಗೆ ಬಂದಿದ್ದ ಬೇರೆ-ಬೇರೆ ಆಸ್ಪತ್ರೆಗಳಿಗೆ ಅಲೆದರೂ ಬೆಡ್ ಸಿಗುತ್ತಿಲ್ಲ ಎಂದು ತಾಯಿಯ ಸಾವಿಗೂ ಮುನ್ನ ಮಗ ಶಾಂತಪ್ಪ ಜಿಮ್ಸ್ ಆಸ್ಪತ್ರೆ ಮುಂದೆ ಕಣ್ಣೀರು ಹಾಕಿದ್ದರು.

**ತಾಯಿ ನೋಡಲು ಆಸ್ಪತ್ರೆ ಕಟ್ಟಡ ಏರಿದ ಮಗ:** ಜಿಮ್ಸ್ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತ ತಾಯಿ ಮುಖ ನೋಡಲು ಬಿಟ್ಟಿಲ್ಲ ಎಂದು ಆರೋಪಿಸಿ ಯುವಕನೊಬ್ಬ ಆಸ್ಪತ್ರೆಯ ಕಟ್ಟಡ ಏರಿದ ಘಟನೆ ನಡೆದಿದೆ. ಕಳೆದ 12 ದಿನಗಳಿಂದ ಆಸ್ಪತ್ರೆಯಲ್ಲಿ ತಾಯಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ತಾಯಿಯ ಆರೋಗ್ಯ ಸ್ಥಿತಿ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದು ಆಕೆಯ ಮಗ ಕಟ್ಟಡ ಏರಿದ್ದ, ನಂತರ ಆಸ್ಪತ್ರೆಯವರು ಮನವೊಲಿಕೆ ಮಾಡಿದ ಬಳಿಕ ಆತ ಕಟ್ಟಡದಿಂದ ಕೆಳಗಿಳಿದ್ದ ಎಂದು ಹೇಳಲಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶರಣಬಸಪ್ಪ ಗಣಜಲಖೇಡ್ ನನ್ನ ಗಮನಕ್ಕೆ ಬಂದಿಲ್ಲ ಎಂದರು.

# ಸೋಂಕಿತರು ಬೆಂಗಳೂರಿನಿಂದ ಗುಳೆ

### ಚಿಕಿತ್ಸೆಗಾಗಿ ತುಮಕೂರು, ದಾವಣಗೆರೆ, ಚಿತ್ರದುರ್ಗ, ಧಾರವಾಡಕ್ಕೆ ವಲಸೆ

• ಎಚ್.ಕೆ. ನಟರಾಜ


ಸಾಂದರ್ಭಿಕ ಚಿತ್ರ

**ದಾವಣಗೆರೆ:** ಬೆಂಗಳೂರಿನಲ್ಲಿ ಕೊರೊನಾರ್ಭಟ ಹೆಚ್ಚಾಗಿ ಆಸ್ಪತ್ರೆಗಳಲ್ಲಿ ಬೆಡ್, ವೆಂಟಿಲೇಟರ್, ಐಸಿಯು ಕೊರತೆ ಹಿನ್ನೆಲೆಯಲ್ಲಿ ರಾಜಧಾನಿಯ ಕೊರೊನಾ ಸೋಂಕಿತರು ಚಿಕಿತ್ಸೆಗಾಗಿ ಹೊರ ಜಿಲ್ಲೆಗಳತ್ತ ಹೆಜ್ಜೆ ಇಟ್ಟಿದ್ದಾರೆ.

ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಬೆಂಗಳೂರಿನಲ್ಲಿ ಕೋವಿಡ್ ಕೇರ್ ಸೆಂಟರ್‌ಗಳನ್ನು ಹೆಚ್ಚಿಸಲಾಗುತ್ತಿದೆ. ವೆಂಟಿಲೇಟರ್ ವ್ಯವಸ್ಥೆಯತ್ತ ಗಮನಹರಿಸಲಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದ್ದರೂ ಜನರು ಮಾತ್ರ ಬೆಂಗಳೂರಿನಲ್ಲಿ ಕೊರೊನಾ ಚಿಕಿತ್ಸೆ ಅಷ್ಟು ಸುಲಭವಾಗಿ ಸಿಗುತ್ತಿಲ್ಲ ಎಂಬ ಕಾರಣ ಮುಂದಿಟ್ಟುಕೊಂಡು ಹೊರ ಜಿಲ್ಲೆಗಳ ಆಸ್ಪತ್ರೆಗಳಿಗೆ ಪ್ರಯಾಣ ಬೆಳೆಸುತ್ತಿದ್ದಾರೆ. ಇದರಿಂದಾಗಿ ರಾಜ್ಯದ ವಿವಿಧ ಜಿಲ್ಲೆಗಳ ಆಸ್ಪತ್ರೆಗಳಲ್ಲಿಯೂ ಬೆಂಗಳೂರಿನ ಸೋಂಕಿತರು ಹೆಚ್ಚಾಗಿದ್ದಾರೆ.

ಕೊರೊನಾ ಪಾಸಿಟಿವ್ ಬಂದವರಲ್ಲಿ ಅನೇಕರು, ತುರ್ತು ಚಿಕಿತ್ಸೆ ಅಗತ್ಯವಿದ್ದವರು ಸೋಂಕಿತರು ಕಡಿಮೆ ಇರುವ ಮತ್ತು ವೆಂಟಿಲೇಟರ್ ವ್ಯವಸ್ಥೆಇರುವ ವಿವಿಧ ಜಿಲ್ಲೆಗಳ ಆಸ್ಪತ್ರೆ ಮಾಹಿತಿ ಪಡೆದುಕೊಂಡು ಹತ್ತಿರದ ಇಲ್ಲವೇ ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬದಿ ಬರುವ ತುಮಕೂರು, ಮೈಸೂರು, ಮಂಡ್ಯ, ಮಂಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ ಜಿಲ್ಲೆಯವರೆಗೂ ಪ್ರಯಾಣ ಬೆಳೆಸುತ್ತಿದ್ದಾರೆ. ಈಗಾಗಲೇ ನೂರಾರು ಜನರು ಹೊರ ಜಿಲ್ಲೆಗಳಲ್ಲಿ ದಾಖಲಾಗಿದ್ದು, ಇವರಲ್ಲಿ ವೆಂಟಿಲೇಟರ್ ಅಗತ್ಯವಿರುವ ರೋಗಿಗಳ ಸಂಖ್ಯೆಯೇ ಅಧಿಕವಾಗಿರುವುದು ಗಮನಾರ್ಹ.

**ಸುಳ್ಳು ವಿಳಾಸ:** ಬೆಂಗಳೂರಿನಿಂದ ಚಿಕಿತ್ಸೆಗಾಗಿ ಹೊರ ಜಿಲ್ಲೆಗೆ ಹೋಗುತ್ತಿರುವ ರೋಗಿಗಳು ತಮ್ಮ ಸಂಬಂಧಿಗಳ ಸ್ಥಳೀಯ ವಿಳಾಸ, ಇಲ್ಲವೇ ಸುಳ್ಳು ಸ್ಥಳೀಯ ವಿಳಾಸ ನೀಡಿ ಚಿಕಿತ್ಸೆಗೆ ದಾಖಲಾಗುತ್ತಿರುವುದು ಬೆಳಕಿಗೆ ಬಂದಿದೆ. ತುರ್ತು ಚಿಕಿತ್ಸೆಯ ಅಗತ್ಯದೊಂದಿಗೆ ಬಂದಿರುವ ರೋಗಿಗಳನ್ನು ಹೆಚ್ಚಿನ ವಿಚಾರಣೆ ಮಾಡದೆ ತಕ್ಷಣ ಚಿಕಿತ್ಸೆ ನೀಡಲು ಮುಂದಾಗುತ್ತಿರುವುದರಿಂದ ಆರಂಭದಲ್ಲಿ ವಿಳಾಸದ ಬಗ್ಗೆ ಯಾರೂ ಗಂಭೀರವಾಗಿ ಪರಿಗಣಿಸಿಲ್ಲ. ಆದರೆ ದಿನದಿಂದ ದಿನಕ್ಕೆ ಬೆಂಗಳೂರಿನ ರೋಗಿಗಳೇ ತುಂಬಿಕೊಳ್ಳುತ್ತಿರುವುದು ಸ್ಥಳೀಯ ಜಿಲ್ಲಾಡಳಿತಗಳಿಗೆ ತಲೆನೋವಾಗಿದೆ.

**ಚಿಕಿತ್ಸೆಗೆ ನಿರಾಕರಣೆ:** ಸುಳ್ಳು ವಿಳಾಸ ನೀಡಿ ಹೊರ ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಬೆಂಗಳೂರಿನ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೆಲವು ಜಿಲ್ಲಾಡಳಿತಗಳು ಈಗಷ್ಟೇ ಎಚ್ಚೆತ್ತುಕೊಂಡಿದ್ದು, ಹೊರ ಜಿಲ್ಲೆಯ ರೋಗಿಗಳಿಗೆ ಚಿಕಿತ್ಸೆ ನೀಡಲು ನಿರಾಕರಿಸುತ್ತಿವೆ. ಜಿಲ್ಲಾ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಬೆಂಗಳೂರಿನ ಸೋಂಕಿತರೇ ಆಶ್ರಯ ಪಡೆದುಕೊಂಡು ಮುಂದೆ ತಮ್ಮ ಜಿಲ್ಲೆಯಲ್ಲಿ ಸೋಂಕು ಹೆಚ್ಚಾದರೆ ಸ್ಥಳೀಯರಿಗೆ ತೊಂದರೆಯಾಗುತ್ತದೆ ಎಂಬ ಕಾಳಜಿ ಜಿಲ್ಲಾಡಳಿತಗಳದ್ದಾಗಿದೆ. ಸ್ಥಳೀಯರಿಗೆ ಆದ್ಯತೆ ನೀಡುವ ದೃಷ್ಟಿಯಿಂದ ಜಿಲ್ಲಾಡಳಿತಗಳು ದಾಖಲಾಗುವವರ ವಿಳಾಸವನ್ನು ಗಂಭೀರವಾಗಿ ಪರಿಶೀಲಿಸಲು ಕ್ರಮ ವಹಿಸಿವೆ.

**ಪ್ರಭಾವಿಗಳ ಶಿಫಾರಸು:** ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ರಾಜಕಾರಣಿಗಳು, ಗಣ್ಯರು, ಪ್ರಭಾವಿಗಳು ಶಿಫಾರಸು ಮಾಡಿದರೂ ಆಸ್ಪತ್ರೆಗಳಲ್ಲಿ ಬೆಡ್, ವೆಂಟಿಲೇಟರ್ ಸಿಗುತ್ತಿಲ್ಲ. ಆದರೆ ಅಲ್ಲಿಯ ಪ್ರಭಾವಿಗಳು ಹೊರ ಜಿಲ್ಲೆಗಳ ಅಧಿಕಾರಿಗಳು, ರಾಜಕಾರಣಿಗಳ ಮೂಲಕ ಶಿಫಾರಸು ಮಾಡಿ ತಮಗೆ ಬೇಕಾದವರಿಗೆ ಕೊರೊನಾ ಚಿಕಿತ್ಸೆಗಾಗಿ ದಾಖಲಿಸುವ ವ್ಯವಸ್ಥೆಯೂ ತೆರೆಮರೆಯಲ್ಲಿ ನಡೆದಿದೆ.

ಒಟ್ಟಾರೆ ಬೆಂಗಳೂರಿನ ಸೋಂಕಿತರಿಗೆ ಬೆಂಗಳೂರಿನಲ್ಲಿಯೂ ಸುಲಭವಾಗಿ ವೈದ್ಯಕೀಯ ಸೇವೆ ಸಿಗುತ್ತಿಲ್ಲ, ಹೊರ ಜಿಲ್ಲೆಗಳಲ್ಲಿಯೂ ಸುಲಭವಾಗಿ ಚಿಕಿತ್ಸೆ ಸಿಗುತ್ತಿಲ್ಲ. ಹೀಗಾಗಿ ಬೆಂಗಳೂರಿಗರಿಗೆ ಬೆಂಗಳೂರೇ ಗತಿ ಎಂಬಂತಾಗಿದೆ.

> **ಜಿಲ್ಲೆಯ ಆಸ್ಪತ್ರೆಗಳಲ್ಲಿಯೂ ಬೆಂಗಳೂರಿನ ಕೆಲವು ಕೊರೊನಾ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಎಷ್ಟು ಜನರು ಪಡೆಯುತ್ತಿದ್ದಾರೆಂಬುದನ್ನು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಇನ್ನು ಮುಂದೆ ಕೊರೊನಾ ಚಿಕಿತ್ಸೆಗೆ ದಾಖಲಾಗುವವರ ವಿಳಾಸ ಸರಿಯಾಗಿ ಪರಿಶೀಲಿಸಿ ಸ್ಥಳೀಯರೇ ಎಂಬುದನ್ನು ಖಚಿತಪಡಿಸಿ ದಾಖಲು ಮಾಡಿಕೊಳ್ಳಲು ಕ್ರಮ ವಹಿಸಲಾಗುವುದು.**
>
> • ಡಾ। ನಾಗರಾಜ, ಜಿಲ್ಲಾ ಆರೋಗ್ಯಾಧಿಕಾರಿ, ದಾವಣಗೆರೆ

> **ಬೆಂಗಳೂರಿನಲ್ಲಿ ಬೆಡ್ ಸಿಗದೆ ಕೆಲವರು ದಾವಣಗೆರೆಗೆ ಬಂದು ಖಾಸಗಿ ಮತ್ತು ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿರುವ ವಿಷಯ ಗಮನಕ್ಕೆ ಬಂದಿದೆ. ಇನ್ನು ಮುಂದೆ ಹೊರ ಜಿಲ್ಲೆಯವರನ್ನು ದಾಖಲು ಮಾಡಿಕೊಳ್ಳುವಾಗ ಕಡ್ಡಾಯವಾಗಿ ನನ್ನ ಗಮನಕ್ಕೆ ತರಬೇಕು ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದ್ದೇನೆ.**
>
> • ಮಹಾಂತೇಶ ಬೀಳಗಿ, ಜಿಲ್ಲಾಧಿಕಾರಿ, ದಾವಣಗೆರೆ

## ವರ್ಗಾವಣೆ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ: ಇಂದು ನಿರ್ಧಾರ?

**ಬೆಂಗಳೂರು:** ಶಾಲಾ ಶಿಕ್ಷಕರ ವರ್ಗಾವಣೆ ಕಾಯ್ದೆಗೆ ಮತ್ತೊಮ್ಮೆ ತಿದ್ದುಪಡಿ ತಂದು ಸುಗ್ರೀವಾಜ್ಞೆ ಹೊರಡಿಸುವ ಬಗ್ಗೆ ಸೋಮವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ.



ಕಡ್ಡಾಯ ಹಾಗೂ ಹೆಚ್ಚುವರಿ ವರ್ಗಾವಣೆ ಪಡೆದವರು ಪುನಃ ತಮ್ಮ ತಾಲೂಕಿಗೆ ಮರಳಲು ಅನುಕೂಲ ಆಗುವಂತೆ ಕಡ್ಡಾಯ ಹಾಗೂ ಹೆಚ್ಚುವರಿ ವರ್ಗಾವಣೆ ಪಡೆದವರಿಗೆ ಮೊದಲ ಆದ್ಯತೆ ನೀಡಿ ವರ್ಗಾವಣೆ ನಿಯಮ ರೂಪಿಸಿರುವುದನ್ನು ಪ್ರಶ್ನಿಸಿ ಕೆಲವು ಶಿಕ್ಷಕರು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ(ಕೆಎಟಿ) ಮೆಟ್ಟಿಲೇರಿದ್ದರು. ಕೆಎಟಿ ಶಿಕ್ಷಕರ ಅರ್ಜಿಯನ್ನು ಮಾನ್ಯ ಮಾಡಿತ್ತು, ಕೆಎಟಿ ತೀರ್ಪನ್ನು ಶಿಕ್ಷಣ ಇಲಾಖೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತು. ಹೈಕೋರ್ಟ್ ಕೂಡ ಕೆಎಟಿ ತೀರ್ಪನ್ನೇ ಎತ್ತಿ ಹಿಡಿದಿದ್ದರಿಂದ ವರ್ಗಾವಣೆ ಪ್ರಕ್ರಿಯೆ ಸದ್ಯಕ್ಕೆ ನಡೆಯುತ್ತಿಲ್ಲ.

ಹೀಗಾಗಿ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ವರ್ಗಾವಣೆ ಕಾಯ್ದೆಗೆ ತಿದ್ದುಪಡಿ ತಂದು, ಸುಗ್ರೀವಾಜ್ಞೆ ಹೊರಡಿಸಿ, ರಾಜ್ಯಪಾಲರಿಂದ ಅನುಮೋದನೆ ಪಡೆಯಲು ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ಸಚಿವ ಸಂಪುಟದ ತೀರ್ಮಾನವಷ್ಟೇ ಬಾಕಿ ಇದೆ. ಹೀಗಾಗಿ ಸೋಮವಾರದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕಾಯ್ದೆಗೆ ತಿದ್ದುಪಡಿ ತರುವ ಸಂದರ್ಭದಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆ ಪಡೆದವರಿಗೆ ಮೊದಲ ಆದ್ಯತೆ ನೀಡುವ ಜತೆಗೆ ಕಲ್ಯಾಣ ಕರ್ನಾಟಕ (ಹೈದರಬಾದ್ ಕರ್ನಾಟಕ) ಭಾಗದಲ್ಲಿ ಶೇ.25ಕ್ಕಿಂತ ಹೆಚ್ಚು ಹುದ್ದೆ ಖಾಲಿಯಿದ್ದರೆ ವರ್ಗಾವಣೆ ಪಡೆಯಲು ಸಾಧ್ಯವಿಲ್ಲ ಎಂಬ ನಿಯಮವನ್ನು ತಿದ್ದುಪಡಿ ಮಾಡಬೇಕು. ಈಗಾಗಲೇ 72 ಸಾವಿರಕ್ಕೂ ಅಧಿಕ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಾರೆ. ರಜಾ ಅವಧಿಯಲ್ಲಿ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ, ಮುಂದಿನ ಶೈಕ್ಷಣಿಕ ವರ್ಷದ ಆರಂಭದಿಂದಲೇ ಹೊಸ ಸ್ಥಳದಲ್ಲಿ ಶಿಕ್ಷಕರು ಸೇವೆ ಸಲ್ಲಿಸಲು ಅನುಕೂಲ ಮಾಡಿಕೊಡಬೇಕು ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಿ ಒತ್ತಾಯಿಸಿದ್ದಾರೆ.

**CLASSIFIED**

**ಉದ್ಯೋಗಾವಕಾಶಗಳು**

ಮಣಿಪಾಲದಲ್ಲಿರುವ ಪ್ರೆಸ್‌ನಲ್ಲಿ ಕೆಲಸ ಮಾಡುವರೇ SSLC/ PUC/ ITI ಕಲಿತಿರುವ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ. ತಿಂಗಳಿಗೆ ರೂ.12,720/-+ OT, EPF/ ESI ಸೌಲಭ್ಯವಿದೆ. (Age Limit 18-35). ಸಂಪರ್ಕಿಸಿರಿ: 9845607627, 9482575267, 9632936713, 9880617798.
PC02021RA000882089

**SALE**

For Sale: 52 Cents Land On Main Road Padukone Kundapur, Contact: 9606640830.
PC02021RA000887405

**ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್**
GPL
ನೋಂದಾಯಿತ ಕಚೇರಿ:
ನಂ.24, 2ನೇ ಮುಖ್ಯರಸ್ತೆ,
ದೊಡ್ಡನೆಕ್ಕುಂದಿ ಕೈಗಾರಿಕಾ ಪ್ರದೇಶ, 1ನೇ ಹಂತ,
ಮಹದೇವಪುರ ಅಂಚೆ, ಬೆಂಗಳೂರು - 560 048.
ದೂರವಾಣಿ: 080-2852 4133
ಫ್ಯಾಕ್ಸ್: 080-28524171
E-mail : info@gpl.in, Website: www.gpl.in
CIN : L23209KA1977PLC043357

**ಸಾರ್ವಜನಿಕ ಸೂಚನೆ**

**ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಷೇರುದಾರರ ಗಮನಕ್ಕೆ**

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್ ರವರು ಮನವಿ ಮಾಡುವುದೇನೆಂದರೆ, ಷೇರುದಾರರು ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಡಿಪೊಸಿಟರಿ ಪಾರ್ಟಿಸಿಪೆಂಟ್ ಮೂಲಕ ಡಿಮ್ಯಾಟ್ ಸಂಬಂಧಿತ ದಾಖಲೆಗಳಲ್ಲಿ ಈ ಕೆಳಗಿನ ವಿವರಗಳನ್ನು ಅಪ್‌ಡೇಟ್ ಮಾಡಲು ಸೂಚಿಸಲಾಗಿದೆ ಅಥವಾ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್‌ರ ಜಾಲತಾಣ ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್("ಆರ್‌ಟಿಎ")ನ https://www.bigshareonline.com/InvestorRegistration.aspx ಮೂಲಕ ವಿವಿಧ ದಾಖಲೆಗಳು ಅಥವಾ ಮಾಹಿತಿಗಳನ್ನು ಕಳುಹಿಸುವ ಸಲುವಾಗಿ ನೋಂದಾಯಿಸಲು ಸೂಚಿಸಿದೆ.

ಆರ್‌ಟಿಎ ಅನ್ನು ಇಲ್ಲಿಯೂ ಸಹ ಸಂಪರ್ಕಿಸ ಬಹುದಾಗಿದೆ: investor@bigshareonline.com ಈಗಾಗಲೇ ಮಿಂಚಂಚೆ ಮತ್ತು ಮೊಬೈಲ್ ಸಂಖ್ಯೆಯನ್ನು ಅಪ್‌ಡೇಟ್ ಮಾಡಿರುವ ಷೇರುದಾರರು ಯಾವುದೇ ಮಾರ್ಪಾಡು ಮಾಡುವ ಅಗತ್ಯವಿರುವುದಿಲ್ಲ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಪರವಾಗಿ
ಸಹಿ/- ಊರ್ಮಿ ಎನ್ ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ
ಡಿ.ಐ.ಎನ್ : 00319482
ದಿನಾಂಕ : 26ನೇ ಏಪ್ರಿಲ್, 2021
ಸ್ಥಳ : ಬೆಂಗಳೂರು

**DhanlaxmiBank**

**ಚಿನ್ನಾಭರಣದ ಹರಾಜಿನ ಸೂಚನೆ**

ನಮ್ಮ ಬ್ಯಾಂಕ್ ಕಸ್ತೂರ್ಬಾ ರಸ್ತೆ ಶಾಖೆಯಲ್ಲಿ ಗ್ರಾಹಕರು ಚಿನ್ನಾಭರಣದ ಸಾಲವನ್ನು ಪಡೆದಿದ್ದು ಅದನ್ನು ಪಾವತಿಸಲು ವಿಫಲರಾದ ಕಾರಣ ಅವರಿಗೆ ನೋಂದಾಯಿತ ಸೂಚನೆಯನ್ನು ಕಳುಹಿಸಲಾಗಿತ್ತು. ಚಿನ್ನಾಭರಣಗಳ ಸಾಲ ಪಡೆದ ಗ್ರಾಹಕರು ಸೂಚನೆಯನ್ನು ಸ್ವೀಕರಿಸದ್ದು ಅಥವಾ ಕೆಲವಂದ ನೋಟಿಸು ಹಿಂದಿರುಗಿ ಬಂದಿರುವ ಕಾರಣ ಕಸ್ತೂರ್ಬಾ ರಸ್ತೆ ಶಾಖೆಯವರು ಇರಿಸಿಟ್ಟ ಚಿನ್ನಾಭರಣಗಳನ್ನು ಕಸ್ತೂರ್ಬಾ ರಸ್ತೆ ಶಾಖೆಯಲ್ಲಿ ದಿನಾಂಕ 10.05.2021ರಂದು ಮಧ್ಯಾಹ್ನ 2.00ಗಂಟೆಗೆ ಸಾರ್ವಜನಿಕ ಹರಾಜು/ ಖಾಸಗಿಯಾಗಿ ಮಾರಾಟ ಮಾಡಲು ನಿರ್ಧರಿಸಿರುತ್ತಾರೆ. ಎಲ್ಲಾ ಸಾರ್ವಜನಿಕ ಹರಾಜು ಮಾರಾಟದ ವಿವರಗಳು ನಿಂದರೆ ಷರತ್ತುಗಳು ಮತ್ತು ನಿಯಮಗಳನ್ನು ಸಂಬಂಧಿತ ಶಾಖೆಯ ಸೂಚನಾ ಫಲಕದಲ್ಲಿ ನೀಡಲಾಗಿದೆ. ಬ್ಯಾಂಕು ಹರಾಜನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಎಲ್ಲಾ ಅಧಿಕಾರವನ್ನು ಹೊಂದಿರುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಅಧಿಕೃತ ಅಧಿಕಾರಿಯವರ ತೀರ್ಮಾನವೂ ಅಂತಿಮವಾಗಿರುತ್ತದೆ.
ಸ್ಥಳ: ಕಸ್ತೂರ್ಬಾ ರಸ್ತೆ, ಬೆಂಗಳೂರು ದಿನಾಂಕ:26.04.2021

## ಕೊರೊನಾ ನಿರ್ವಹಣೆಗೆ ಸಂಪೂರ್ಣ ಸಹಕಾರ

**ಬೆಂಗಳೂರು:** ಕೊರೊನಾ ವಿರುದ್ಧದ ಹೋರಾಟಕ್ಕೆ ಪೂರಕವಾಗಿ ಕೇಂದ್ರ ಸರ್ಕಾರದಿಂದ ಅಗತ್ಯ ಔಷಧ, ಲಸಿಕೆ, ಆಮ್ಲಜನಕ ಪೂರೈಕೆ ಸೇರಿ ಎಲ್ಲ ರೀತಿಯ ನೆರವು, ಸಹಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗುವುದು ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ.ಸದಾನಂದ ಗೌಡ ಅವರು ಭರವಸೆ ನೀಡಿದರು.



ವಿಧಾನಸೌಧದಲ್ಲಿ ಭಾನುವಾರ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಮುಖ್ಯಕಾರ್ಯದರ್ಶಿ ಪಿ.ರವಿ ಕುಮಾರ್, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಜಾವೇದ್ ಅಕ್ತರ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ರಮಣ ರೆಡ್ಡಿ ಸೇರಿ ಉನ್ನತಾಧಿಕಾರಿಗಳ ಜತೆ ಸಭೆ ನಡೆಸಿ, ಕೊರೊನಾ ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದರು.

ನಂತರ ಮಾತನಾಡಿ, ಕೊರೊನಾದ ವಿರುದ್ಧ ಹೋರಾಡಲು ರಾಜ್ಯಕ್ಕೆ ಅಗತ್ಯವಾದ ನೆರವು ನೀಡಲು ಕೇಂದ್ರ ಸರ್ಕಾರ ಸದಾ ಸಿದ್ಧವಿದೆ. ತುರ್ತು ನೆರವು, ರೆಮ್ ಡೆಸಿವಿಯರ್ ಔಷಧ ಸೇರಿದಂತೆ ಎಲ್ಲ ಅಗತ್ಯತೆಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಂಡು, ರಾಜ್ಯಕ್ಕೆ ಅಗತ್ಯವಿರುವ ಔಷಧಗಳನ್ನು ಒದಗಿಸಲು ದೆಹಲಿಯ ತಮ್ಮ ಕಚೇರಿಯಲ್ಲಿ ಹಿರಿಯ ಅಧಿಕಾರಿಯೊಬ್ಬರನ್ನು ನಿಯೋಜಿಸಿರುವುದಾಗಿ ಹೇಳಿದರು.

> **ಲಸಿಕೆ ಪಡೆಯುವ ಜವಾಬ್ದಾರಿ ಜನರದ್ದಾಗಿದೆ. ಕೊರೊನಾ ಮೂರನೇ ಅಲೆ ಎದುರಿಸಲು ಇದು ಅತ್ಯವಶ್ಯ. ರಾಜ್ಯದಲ್ಲಿ ವಾರಾಂತ್ಯದ ಕರ್ಫ್ಯೂ ಯಶಸ್ವಿಯಾಗಿದೆ. ಇದನ್ನು ಮುಂದಿನ ವಾರಾಂತ್ಯವೂ ಮುಂದುವರಿಸುವ ಬಗ್ಗೆ ಮುಖ್ಯಮಂತ್ರಿ ಮತ್ತವರ ಸಂಪುಟ ಸದಸ್ಯರು ನಿರ್ಧರಿಸುತ್ತಾರೆ.**
>
> • ಡಿ.ವಿ.ಸದಾನಂದಗೌಡ, ಕೇಂದ್ರ ಸಚಿವ

## ವಿಷಸೇವಿಸಿ ಪ್ರೇಮಿಗಳ ಆತ್ಮಹತ್ಯೆ

**ಹಾವೇರಿ:** ವಿಷಸೇವಿಸಿ ಪ್ರೇಮಿಗಳಿಬ್ಬರು ಆತ್ಮಹತ್ಯೆಗೆ ಶರಣಾದ ಘಟನೆ ತಾಲೂಕಿನ ನಾಗನೂರು ಗ್ರಾಮದ ಬಳಿ ಭಾನುವಾರ ಬೆಳಕಿಗೆ ಬಂದಿದೆ. ನಾಗನೂರು ಗ್ರಾಮದ ವಿದ್ಯಾಶ್ರೀ ಗಾಳಿ(22) ಹಾಗೂ ಇರ್ಷಾದ್ ಕುಡಚಿ(23) ಆತ್ಮಹತ್ಯೆ ಮಾಡಿಕೊಂಡ ಪ್ರೇಮಿಗಳು.

ಇಬ್ಬರೂ ಕೆಲ ವರ್ಷಗಳಿಂದ ಪ್ರೀತಿಸುತ್ತಿದ್ದರು. ಇವರ ಪ್ರೀತಿಗೆ ಮನೆಯವರ ವಿರೋಧವಿತ್ತು. ಯುವತಿ ಮನೆಯವರು ಇತ್ತೀಚೆಗೆ ಕಾಕೋಳ ಗ್ರಾಮದ ಯುವಕನೊಬ್ಬನೊಂದಿಗೆ ನಿಶ್ಚಿತಾರ್ಥದ ನೆಪದಲ್ಲಿ ಮದುವೆ ಮಾಡಿಸಿದ್ದರು ಎನ್ನಲಾಗಿದೆ. ಹೀಗಾಗಿ, ಇಬ್ಬರೂ ಏ.23ರಂದು ರಾತ್ರಿ ಮನೆ ಬಿಟ್ಟು ಹೋಗಿದ್ದರು. ಶನಿವಾರ ಕರ್ಫ್ಯೂ ಘೋಷಣೆಯಾಗಿದ್ದರಿಂದ ದೂರದೂರಿಗೆ ಹೋಗಲು ಸಾಧ್ಯವಾಗಿರಲಿಲ್ಲ. ಅಲ್ಲದೇ, ಎಲ್ಲಿಯೂ ವಾಸ್ತವ್ಯಕ್ಕೆ ವ್ಯವಸ್ಥೆಯೂ ಆಗಿರಲಿಲ್ಲ. ಇದರಿಂದ ಕಂಗಾಲಾದ ಪ್ರೇಮಿಗಳು ಶನಿವಾರ ತಡರಾತ್ರಿ ಗ್ರಾಮಕ್ಕೆ ಆಗಮಿಸಿದ್ದಾರೆ. ಮನೆಯವರು ತಮ್ಮಿಬ್ಬರನ್ನು ಒಂದಾಗಿ ಬಾಳಲು ಬಿಡುವುದಿಲ್ಲ ಎಂದುಕೊಂಡು ಯುವಕನ ತಾತನಿಗೆ ಸೇರಿದ ಜಮೀನಿನಲ್ಲಿಯೇ ಇಬ್ಬರೂ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಹಾವೇರಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ನಡುವೆ ಮಗಳು ವಿದ್ಯಾಶ್ರೀ ನಾಪತ್ತೆಯಾಗಿದ್ದಾಳೆ ಎಂದು ಯುವತಿಯ ತಾಯಿ ಲಲಿತಾ ಶಿವಪ್ಪ ಗಾಳಿ ಎಂಬುವವರು ಏ.23ರಂದು ನಗರದ ಮಹಿಳಾ ಠಾಣೆಯಲ್ಲಿ ದೂರು ದಾಖಲಿಸಿದ್ದರು.

## ಪರೀಕ್ಷೆ ಮುಂದೂಡಲು ವಿದ್ಯಾರ್ಥಿಗಳ ಆಗ್ರಹ

**ಬೆಂಗಳೂರು:** ಕೊರೊನಾ ಹಿನ್ನೆಲೆಯಲ್ಲಿ ವಿವಿಧ ವಿಶ್ವವಿದ್ಯಾಲಯಗಳು ಪರೀಕ್ಷೆಗಳನ್ನು ಮುಂದೂಡಿರುವ ಮಾದರಿಯಲ್ಲೇ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವೂ ಪರೀಕ್ಷೆಯನ್ನು ಮುಂದೂಡಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ಕೊರೊನಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮೇ 4ರವರೆಗೂ ಕಠಿಣ ನಿಯಮ ಜಾರಿಗೆ ತಂದಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಕಷ್ಟವಾಗುತ್ತಿದೆ. ಅಲ್ಲದೆ, ಬೆಂಗಳೂರು ನಗರ ಸಹಿತವಾಗಿ ವಿವಿಧ ಕಡೆ ಕೊರೊನಾ ತೀವ್ರತೆ ಹೆಚ್ಚಿದೆ. ಹೀಗಾಗಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಸೆಮಿಸ್ಟರ್ ಪರೀಕ್ಷೆಗಳನ್ನು ಮುಂದೂಡಬೇಕು ಎಂದು ವಿದ್ಯಾರ್ಥಿಗಳು ವಿಟಿಯು ಆಡಳಿತ ಮಂಡಳಿಯನ್ನು ಒತ್ತಾಯಿಸಿದ್ದಾರೆ.

ತರಗತಿಗಳು ಕೂಡ ಸರಿಯಾಗಿ ನಡೆದಿಲ್ಲ. ಅಲ್ಲದೆ, ಗ್ರಾಮೀಣ ಭಾಗದಲ್ಲಿ ಸಾರಿಗೆ ವ್ಯವಸ್ಥೆ ಸರಿಯಾಗಿಲ್ಲ. ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪರೀಕ್ಷೆ ಬರೆಸುವುದು ಸರಿಯಲ್ಲ. ಪರೀಕ್ಷೆಯನ್ನು ಮುಂದೂಡಿ, ಪರಿಸ್ಥಿತಿ ತಿಳಿಯಾದ ನಂತರ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

## ವಕೀಲರ ಸಂಘಗಳ ವಿರುದ್ಧ ಕ್ರಮ ಕೈಗೊಳ್ಳಬೇಕು: ಹೈಕೋರ್ಟ್

**ಬೆಂಗಳೂರು:** ಯಾವುದೇ ಪ್ರಕರಣದಲ್ಲಿ ಆರೋಪಿಗಳ ಪರ ವಕಾಲತ್ತು ಹಾಕದಂತೆ ನಿರ್ಣಯಗಳನ್ನು ಕೈಗೊಳ್ಳುವ ವಕೀಲರ ಸಂಘಗಳ ವಿರುದ್ಧ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಕ್ರಮ ಜರುಗಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ.



ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ಮತ್ತು ನ್ಯಾ. ಸೂರಜ್ ಗೋವಿಂದರಾಜ್ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯ ಪೀಠ, ಈ ಆದೇಶ ನೀಡಿತು. ಪ್ರಕರಣವೊಂದರಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಉಲ್ಲೇಖಿಸಿ, ವಕೀಲರ ಸಂಘಗಳು ಆರೋಪಿಗಳ ಪರ ವಕಾಲತ್ತು ಹಾಕದೆ ಇರಲು ನಿರ್ಣಯ ಕೈಗೊಳ್ಳುವುದು ಕಾನೂನು ಬಾಹಿರ ಕ್ರಮವಾಗುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಕಳೆದ ವರ್ಷ ಮೈಸೂರಿನಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿ ಪ್ರತಿಭಟನೆ ವೇಳೆ ಫ್ರೀ ಕಾಶ್ಮೀರ್ ಭಿತ್ತಿಪತ್ರ ಪ್ರದರ್ಶನ ಮಾಡಿದ್ದ ಪ್ರಕರಣದಲ್ಲಿ ಆರೋಪಿ ನಳಿನಿ ಬಾಲಕುಮಾರ್ ಪರ ವಕಾಲತ್ತು ಹಾಕದಂತೆ ಮೈಸೂರು ಜಿಲ್ಲಾ ವಕೀಲರ ಸಂಘ ಕೈಗೊಂಡಿದ್ದ ನಿರ್ಣಯವನ್ನು ಪ್ರಶ್ನಿಸಿ ತುಮಕೂರಿನ ವಕೀಲ ರಮೇಶ್ ಎಲ್.ನಾಯಕ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಹೈಕೋರ್ಟ್ ಈ ಆದೇಶ ನೀಡಿದೆ.

# ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಶಾಂತನಗೌಡರ್ ನಿಧನ

- ■ ಗುರುಗ್ರಾಮದ ಮೇದಾಂತ ಆಸ್ಪತ್ರೆಯಲ್ಲಿ ಚಿಕಿತ್ಸೆ
- ■ ಹಾವೇರಿ ಜಿಲ್ಲೆ ಹಿರೇಕೆರೂರ ತಾಲೂಕಿನ ಚಿಕ್ಕೆರೂರು ಮೂಲದವರು.

**ನವದೆಹಲಿ:** ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ, ಕರ್ನಾಟಕದ ಹಾವೇರಿ ಜಿಲ್ಲೆ ಹಿರೇಕೆರೂರ ತಾಲೂಕಿನ ಚಿಕ್ಕೆರೂರು ಮೂಲದ ಮೋಹನ ಎಂ. ಶಾಂತನಗೌಡರ್ (62) ಗುರುಗ್ರಾಮದ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಶ್ವಾಸಕೋಶದ ಸೋಂಕಿನ ಸಮಸ್ಯೆ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಶನಿವಾರ ರಾತ್ರಿಯ ವರೆಗೆ ಅವರ ಸ್ಥಿತಿ ಉತ್ತಮವಾಗಿತ್ತು. ನಂತರದ ಅವಧಿಯಲ್ಲಿ ಅದು ಗಂಭೀರವಾಯಿತು ಎಂದು ಆಪ್ತ ಮೂಲಗಳು ತಿಳಿಸಿವೆ.

ನ್ಯಾಯಮೂರ್ತಿಗಳ ನಿಧನದ ಬಗ್ಗೆ ಸುಪ್ರೀಂಕೋರ್ಟ್ ಸಂತಾಪ ವ್ಯಕ್ತಪಡಿಸಿದೆ. ಈ ಬಗ್ಗೆ ಕೋರ್ಟ್‌ನ ಸಹಾಯಕ ರಿಜಿಸ್ಟ್ರಾರ್ ಗಗನ್ ಸೋನಿ ಹೇಳಿಕೆ ಹೊರಡಿಸಿ 'ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾಗಿದ್ದ ಮೋಹನ ಎಂ.ಶಾಂತನಗೌಡರ್ ಶನಿವಾರ ನಿಧನರಾಗಿದ್ದಾರೆ. ಅವರ ನಿಧನದಿಂದ ತುಂಬಲಾರದ ನಷ್ಟವಾಗಿದೆ' ಎಂದು ದುಃಖ ವ್ಯಕ್ತಪಡಿಸಲಾಗಿದೆ.



ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಚಿಕ್ಕೆರೂರು ಎಂಬಲ್ಲಿ 1958 ಮೇ 5ರಂದು ಜನಿಸಿದ್ದ ಅವರು, 1980 ಸೆ.5ರಂದು ನ್ಯಾಯವಾದಿಯಾಗಿ ನೋಂದಣಿ ಮಾಡಿಸಿಕೊಂಡಿದ್ದರು. 2003ರ ಮೇ 12ರಂದು ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2004ರಲ್ಲಿ ಅವರು ಖಾಯಂ ನ್ಯಾಯಮೂರ್ತಿಯಾದರು. ನಂತರ ಕೇರಳ ಹೈಕೋರ್ಟ್‌ಗೆ ನ್ಯಾಯಮೂರ್ತಿಯಾಗಿ ವರ್ಗಾವಣೆಗೊಂಡಿದ್ದರು. 2016 ಆ.1ರಂದು ಪ್ರಭಾರ ಮುಖ್ಯ ನ್ಯಾಯಮೂರ್ತಿಯಾಗಿದ್ದರು. 2016 ಸೆ.22ರಂದು ಮುಖ್ಯ ನ್ಯಾಯಮೂರ್ತಿಯಾದರು. 2017 ಫೆ.17ರಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2023 ಮೇ 4ರ ವರೆಗೆ ಅವರ ಸೇವಾವಧಿ ಇತ್ತು.

### ಗಣ್ಯರಿಂದ ಅಂತಿಮ ದರ್ಶನ

**ಬೆಂಗಳೂರು:** ಅನಾರೋಗ್ಯದ ಹಿನ್ನೆಲೆ ನಿಧನ ಹೊಂದಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಮೋಹನ್ ಎಂ. ಶಾಂತನಗೌಡರ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಭಾನುವಾರ ನಗರದ ಚಾಮರಾಜಪೇಟೆಯ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಪಾರ್ಥಿವ ಶರೀರವನ್ನು ವಿಶೇಷ ವಿಮಾನದಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ರಾಜಾಜಿನಗರದ ಅವರ ನಿವಾಸಕ್ಕೆ ತಂದು ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು. ಸಚಿವರಾದ ಬಸವರಾಜ ಬೊಮ್ಮಾಯಿ, ವಿ. ಸೋಮಣ್ಣ, ಬಿ.ಸಿ. ಪಾಟೀಲ್, ಕೆ.ಗೋಪಾಲಯ್ಯ, ನಗರ ಜಿಲ್ಲಾಧಿಕಾರಿ ಸೇರಿದಂತೆ ಅನೇಕ ಗಣ್ಯರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಶಾಂತನಗೌಡರ್ ನಿಧನಕ್ಕೆ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್.ವಿ. ರಮಣ, ಮುಖ್ಯಮಂತ್ರಿ ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ರಾಜ್ಯ ಅಡ್ವೋಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ಕರ್ನಾಟಕ ವಕೀಲರ ಪರಿಷತ್ ಅಧ್ಯಕ್ಷ ಎಲ್. ಶ್ರೀನಿವಾಸ ಬಾಬು ಮತ್ತು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಸೇರಿ ಹಲವು ಗಣ್ಯರು ಕಂಬನಿ ಮಿಡಿದಿದ್ದಾರೆ.

**ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ,**
ನಂದಿನಿ
(FSSC 22000 Ver 5.0 CERTIFIED ORGANISATION)
ಮಂಗಳೂರು ಡೇರಿ ಆವರಣ, ಕುಲಶೇಖರ, ಮಂಗಳೂರು - 575 005 ದೂರವಾಣಿ ಸಂಖ್ಯೆ: (0824) 2231515

ನಂ:ದಕಹಾ.:ಆಡಳಿತ:311:41:609:2021-22 ದಿನಾಂಕ: 23.04.2021

**: ಸಂಕ್ಷಿಪ್ತ ನೇಮಕಾತಿ ಪ್ರಕಟಣೆ :**

ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮೀಣ ಪ್ರದೇಶದಿಂದ ಹಾಲನ್ನು ಸಂಗ್ರಹಿಸಿ, ಸಂಸ್ಕರಿಸಿ ಉತ್ಕೃಷ್ಟ ಗುಣಮಟ್ಟದ ವಿವಿಧ ಹಾಲಿನ ಉತ್ಪನ್ನಗಳನ್ನು ತಯಾರಿಕೆ ಮಾಡಿ ಪಾಶ್ಚರೀಕರಿಸಿದ 'ನಂದಿನಿ' ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ಸರಬರಾಜು ಮಾಡುವ FSSC 22000 Ver 5.0 ದೃಢೀಕರಣ ಪ್ರಮಾಣಪತ್ರ, ಮತ್ತು FSSAI ಆಹಾರ ಸುರಕ್ಷತೆ ಮತ್ತು ಸಂರಕ್ಷಣೆ ಕಾಯಿದೆ 2006, ನಿಯಮ 2011 ರನ್ವಯ ನೋಂದಾವಣೆಯಾಗಿ ಲೈಸನ್ಸ್ ಹೊಂದಿದ ಹಾಗೂ ನ್ಯಾಷನಲ್ ಡೇರಿ ಡೆವಲಪ್‌ಮೆಂಟ್ ಬೋರ್ಡ್ ವತಿಯಿಂದ 'ಕ್ವಾಲಿಟಿ ಮಾರ್ಕ್' ಪ್ರಮಾಣ ಪತ್ರವನ್ನು ಹಾಗೂ ರಾಷ್ಟ್ರೀಯ ಮಟ್ಟದಲ್ಲಿ "ಎಕ್ಸಲೆನ್ಸಿ ಅವಾರ್ಡ್" ಪಡೆದ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾಗಿರುತ್ತದೆ. ಸಂಸ್ಥೆಯ ಕಾರ್ಯಾಚರಣೆಯನ್ನು ಬಲಪಡಿಸಲು ಈ ಕೆಳಗೆ ನಮೂದಿಸಿದ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ Online ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳು, ವೇತನ ಶ್ರೇಣಿ, ಹುದ್ದೆಗಳ ಸಂಖ್ಯೆ ಮತ್ತು ವಿದ್ಯಾರ್ಹತೆ ಇತ್ಯಾದಿ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

| ಕ್ರ. ಸಂ | ಹುದ್ದೆಗಳ ಹೆಸರು | ವೇತನಶ್ರೇಣಿ | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|---|
| 01. | ಸಹಾಯಕ ವ್ಯವಸ್ಥಾಪಕರು (ಪ.ಸಂ/ಕೃ.ಗ) | ರೂ. 52650-97100 | 07 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪಶುವೈದ್ಯಕೀಯ ವಿಜ್ಞಾನದಲ್ಲಿ B.V.Sc./B.V.Sc & AH ಪದವೀಧರರಾಗಿರಬೇಕು. |
| 02. | ತಾಂತ್ರಿಕಾಧಿಕಾರಿ (ಡಿ.ಟಿ) | ರೂ. 43100-83900 | 04 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ನೀಡಲಾಗುವ ಬಿ.ಎಸ್.ಸಿ (ಡಿ.ಟಿ) ಅಥವಾ ಬಿ.ಟೆಕ್ (ಡಿ.ಟೆಕ್) ಅಥವಾ ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆಯಿಂದ (Central Food Technology Research Institution) ಎಂ.ಎಸ್ಸಿ ಇನ್ ಫುಡ್ ಟೆಕ್ನಾಲಜಿ (M.Sc in Food Technology) ಪದವೀಧರರಾಗಿರಬೇಕು. |
| 03. | ತಾಂತ್ರಿಕಾಧಿಕಾರಿ (ಪರಿಸರ) | ರೂ. 43100-83900 | 01 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ B.E in Environment ಅಥವಾ B.E in Chemical ಅಥವಾ M.Sc. in Environment Science ಪದವೀಧರರಾಗಿರಬೇಕು. |
| 04. | ತಾಂತ್ರಿಕ ಅಧಿಕಾರಿ (ಇಂಜಿನಿಯರಿಂಗ್) | ರೂ. 43100-83900 | 01 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ (B.E/B.Tech) ಪದವೀಧರರಾಗಿರಬೇಕು. |
| 05. | ವಿಸ್ತರಣಾಧಿಕಾರಿ ದರ್ಜೆ-3 | ರೂ. 33450-62600 | 08 | **ಹಾಲು ಉತ್ಪಾದಕರ ಸಹಕಾರ ಸಂಘದ ಅರ್ಹ ಕಾರ್ಯದರ್ಶಿಗಳಿಂದ: (ನಾಲ್ಕು ಹುದ್ದೆಗಳು)** ಪದವೀಧರರಾಗಿದ್ದು ಅಂದರೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿಯೊಂದಿಗೆ (10+2+3) ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರಬೇಕು. ಪ್ರಸ್ತುತ ಒಂದು ವರ್ಷದಿಂದ ಸಂಘದ ಕಾರ್ಯದರ್ಶಿಯಾಗಿ ಸೇವೆಯಲ್ಲಿರಬೇಕು.<br>**ಇತರ ಅಭ್ಯರ್ಥಿಗಳಿಂದ: (ನಾಲ್ಕು ಹುದ್ದೆಗಳು)** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಪದವಿಯಲ್ಲಿ ಪದವೀಧರರಾಗಿರಬೇಕು. |
| 06. | ಡೈರಿ ಸೂಪರ್‌ವೈಸರ್ ದರ್ಜೆ-2 | ರೂ. 33450-62600 | 05 | ಯಾವುದೇ ಅಂಗೀಕೃತ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಮೆಕ್ಯಾನಿಕಲ್/ಸಿವಿಲ್/ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ / ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ಸ್ ಇಂಜಿನಿಯರಿಂಗ್ ವಿಷಯಗಳಲ್ಲಿ ಡಿಪ್ಲೋಮಾದಲ್ಲಿ ತೇರ್ಗಡೆಯಾಗಿರಬೇಕು. |
| 07. | ಆಡಳಿತ / ಮಾರುಕಟ್ಟೆ ಸಹಾಯಕರು ದರ್ಜೆ-2 | ರೂ. 27650-52650 | 10 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿಯಲ್ಲಿ ಪದವೀಧರರಾಗಿರಬೇಕು. |
| 08. | ಕೆಮಿಸ್ಟ್ ದರ್ಜೆ-2 | ರೂ. 27650-52650 | 12 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ರಸಾಯನಶಾಸ್ತ್ರ ವಿಷಯವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ವಿಜ್ಞಾನ ಪದವಿ B.Sc ಅಥವಾ B.Sc in Micro Biology ಯಲ್ಲಿ ಪದವೀಧರರಾಗಿರಬೇಕು. |
| 09. | ಲೆಕ್ಕ ಸಹಾಯಕರು ದರ್ಜೆ-2 | ರೂ. 27650-52650 | 02 | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಬಿ.ಕಾಂ / ಬಿ.ಬಿ.ಎ. / ಬಿ.ಬಿ.ಎಮ್ (B.Com/BBA/BBM) ಪದವೀಧರರಾಗಿರಬೇಕು. |
| 10. | ಕಿರಿಯ ತಾಂತ್ರಿಕರು | ರೂ. 21400-42000 | 30 | S.S.L.C ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ/ ಕೇಂದ್ರಗಳಿಂದ ರೆಫ್ರಿಜರೇಷನ್ ಎಂಡ್ ಎ.ಸಿ ಮೆಕ್ಯಾನಿಕ್ (ಎಂ.ಆರ್.ಎ.ಸಿ.)/ ಫಿಟ್ಟರ್/ವೆಲ್ಡರ್/ ಇಲೆಕ್ಟ್ರೀಷಿಯನ್/ ಇಲೆಕ್ಟ್ರಾನಿಕ್ಸ್ /ಇಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ ವಿಷಯಗಳಲ್ಲಿ (Engineering Trades) ಎರಡು ವರ್ಷಗಳ I.T.I. (National Trade Certificate) ತೇರ್ಗಡೆಯಾಗಿರಬೇಕು ಮತ್ತು ಒಂದು ವರ್ಷದ ಶಿಶಿಕ್ಷು ತರಬೇತಿ ಹೊಂದಿರಬೇಕು.<br>**ಬಾಯ್ಲರ್ ಟ್ರೇಡ್:** S.S.L.C ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಕರ್ನಾಟಕ ಸರ್ಕಾರವು ನಡೆಸುವ ದ್ವಿತೀಯ ದರ್ಜೆ ಬಾಯ್ಲರ್ ಅಟೆಂಡೆಂಟ್ ಸರ್ಟಿಫಿಕೇಟ್ ಆಫ್ ಕಾಂಪಿಟೆನ್ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. |

ವಯೋಮಿತಿ, ಮೀಸಲಾತಿ ವರ್ಗೀಕರಣ, ಶುಲ್ಕ, ಆಯ್ಕೆ ವಿಧಾನ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಸಲ್ಲಿಸಬೇಕಾದ ದಾಖಲೆಗಳು, ಇತ್ಯಾದಿ ಹೆಚ್ಚಿನ ಎಲ್ಲಾ ವಿವರಗಳನ್ನು ಒಳಗೊಂಡ ನೇಮಕಾತಿ ಪ್ರಕಟಣೆ, ವಿವಿಧ ನಮೂನೆಗಳು ಮತ್ತು ಇತರೆ ವಿವರಗಳನ್ನು ಒಕ್ಕೂಟದ ವೆಬ್‌ಸೈಟ್ www.dkmul.com ನಲ್ಲಿರುವ Career Menu ಕ್ಲಿಕ್ ಮಾಡಿ, ಅದರಲ್ಲಿರುವ ವಿವರವಾದ ನೇಮಕಾತಿ ಪ್ರಕಟಣೆಯನ್ನು ಓದಿ, ತದನಂತರ Apply Online ಲಿಂಕ್‌ನ್ನು ಕ್ಲಿಕ್ ಮಾಡಿ, ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ. ಖುದ್ದಾಗಿ /ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ, ಖುದ್ದಾಗಿ /ಅಂಚೆ ಮೂಲಕ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದೆಂದು ಈ ಮೂಲಕ ಸ್ಪಷ್ಟಪಡಿಸಿದೆ.

Online ಮೂಲಕ ಅರ್ಜಿಯನ್ನು ಸಲ್ಲಿಸಲು ಪ್ರಾರಂಭವಾಗುವ ದಿನಾಂಕ : 28-04-2021, Online ಮೂಲಕ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 28-05-2021, Online ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ : 29-05-2021, ಸಂಜೆ 5.30 ಗಂಟೆಯವರೆಗೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು